SRI B. B. SAYANAK.—The applicants have deposited a sum of Rs 6,98,849. May I know whether this amount has been refunded to the applicants

SRI D, K. NAIKAR,—That information is not available;

SRI B. B. SAYANAK.—The municipality has allotted 471 sites to the applicants. According to my information the sites ar allotted to outsiders and not to the residents of Belgaum city. Is it correct

SRI D. K. NAIKAR.—On the basis of information given to me, the applications received in 1973 and applications received subsequently, both categories were considered by the committee appointed to scrutinise the applications and then sites have been allotted to the citizens of Belgaum.

SRI B. B. SAYANAK.—My question is that sites have been alloted to the applicants but they have been allotted to outsiders and not to people in Belgaum city.

SRI D. K. NAIKAR.—I said that applications received from Belgaum city were scrutinised and they have been allotted.

9-30 A. M.

Village Accountants in Shimoga District

251 SRI ABDUL KHUDUS ANWAR (Bhadravati).— Will the Minister for Revenue be pleased to state:—

(*a*) the number of Village Accountants posts filled in Shimoga District during the years 1974-75 and 1975-76;

(*b*) out of which the number of persons belonging to Scheduled Castes, Backward Class and either minority communities;

(*c*) the number of Village Accountants kept under suspension during this period, the reasons for their suspension

SRI N. HUTCHAMASTI GOWDA (Minister for Revenue),—

(*a*)—

1974-75	42
1975-76	Nil

(*b*)—

1974-75		1975-76
S.C.	6	
S.T.	1	Not applicable
O,B.C.	12	

(c) –

1974-75	1975-76	Reasons for suspension
3	3	Misappropriation of Govt. money
3	4	Tampering of Records.
7	9	Unauthorised absense and non-residing in Headquarters.
6	7	Misbehavior and dereliction of duty.

ಶ್ರೀ ಅಬ್ದುಲ್ ಖದ್ದೂಸ್ ಅನ್ಸರ್.—ನನ್ನ ಮೊದಲನೆಯ ಪ್ರಶ್ನೆಗೆ ಉತ್ತರವಾಗಿ 1974-75ರಲ್ಲಿ ಭರ್ತಿ ಮಾಡಿದ ಹುದ್ದೆಗಳ ಸಂಖ್ಯೆ 42ಎಂದು ಹೇಳಿದ್ದೀರಿ. ಅಂದರೆ ಆ ಸಮಯದಲ್ಲಿ ಹುದ್ದೆಗಳು ಖಾಲಿ ಇದ್ದದ್ದು 42 ಅಥವಾ 102 ಎಂಬುದನ್ನು ತಿಳಿಸಬೇಕು?

†ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆಗ ವೇಕೆನ್ಸಿ ಇದ್ದದ್ದು 42 ಎಂದು ಉತ್ತರದಲ್ಲಿಯೇ ಹೇಳಿದ್ದೇನೆ. ಮತ್ತು ಅಷ್ಟನ್ನೂ ಭರ್ತಿ ಮಾಡಲಾಗಿದೆ.

ಶ್ರೀ ಅಬ್ದುಲ್ ಖದ್ದೂಸ್ ಅನ್ಸರ್.—ಆ ಸಾಲಿನಲ್ಲಿ 102 ಹುದ್ದೆಗಳು ಖಾಲಿ ಇದ್ದರೂ ನಹ ಕೇವಲ 42 ಹುದ್ದೆಗಳನ್ನು ಭರ್ತಿ ಮಾಡಲು ಕಾರಣವೇನು?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಒಟ್ಟು ಮುಂಜೂರು ಆದ ಪೋಸ್ಟ್‌ಗಳು 449 ಆದರಲ್ಲಿ ವರ್ಷೇವರ್ಷ ಅನೇಕರು ಡಿಸ್‌ಮಿಸ್ ಆಗಿ ಹೋಗುತ್ತಿರುತ್ತಾರೆ. ಅವರ ಜಾಗಕ್ಕೆ ಹೊಸಬರು ಬರುತ್ತಿರುತ್ತಾರೆ. ಎಷ್ಟು ಜನರನ್ನು ತಾತ್ಕಾಲಿಕವಾಗಿ ಹುದ್ದೆಯಿಂದ ತೆಗೆಯಲಾಯಿತೆಂಬುದನ್ನು ಮತ್ತು ಯಾವಯಾವ ಕಾರಣಕ್ಕಾಗಿ ತೆಗೆಯಲಾಯಿತೆಂಬುದನ್ನು ತಮ್ಮ 3 ಪ್ರಶ್ನೆಗೆ ಉತ್ತರವಾಗಿ ಹೇಳಿದ್ದೇನೆ.

ಶ್ರೀ ಬಿ. ಬ್ಯಾರಪ್ಪಾಜಿ.—ಇಲ್ಲಿ ತಾತ್ಕಾಲಿಕವಾಗಿ ತೆಗೆದುಹಾಕಲಾಗಿದೆ ಎಂದು ಹೇಳಲಾಗಿದೆ ಅಂದರೆ ಇದು ಸಸ್ಪೆನ್‌ಷನ್ನೋ ಅಥವಾ ಪಜಾನೋ ಎಂಬುದನ್ನು ಹೇಳಬೇಕು? ಎರಡನೆಯದಾಗಿ ಈ ಗ್ರಾಮಲೆಕ್ಕಿಗರಿಂದ ಈ ರಾಜ್ಯದ ಜನತೆಗೆ ಬಹಳ ಅನಾನುಕೂಲವಾಗುತ್ತಿದೆ. ಮುಖ್ಯವಾಗಿ ಇವರುಗಳು ಅಕ್ರಮವಾಗಿ ಪಹಣಿಯನ್ನು ತಿದ್ದುವುದು ಮತ್ತು ಖಾತೆಗಳನ್ನು ಬದಲಾವಣೆ ಮಾಡುವುದನ್ನು ನಡೆಸುತ್ತಿದ್ದಾರೆ. ಈ ಎರಡರ ಬಗ್ಗೆ ಸರ್ಕಾರದವರು ಯಾವುದಾದರು ಬೇರೆ ಒಂದು ಥೋರಣೆಯನ್ನು ತಾಳದೇ ಹೋದರೆ ಲಕ್ಷಾಂತರ ಜನರಿಗೆ ಕೋಟ್ಯಾಂತರ ಜನರಿಗೆ ಆಗುತ್ತಿರುವ ಕಿರುಕುಳವನ್ನು ತಪ್ಪಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಆದಕಾರಣ ಇದಕ್ಕೆ ಬೇರೆ ಏನಾದರು ವ್ಯವಸ್ಥೆ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಹಿಂದೆ ಇವರ ಜಾಗದಲ್ಲಿ ಅನುವಂಶಿಕವಾಗಿ ಶಾನುಭೋಗರು ಮತ್ತು ಪಟೇಲರು ಇದ್ದರು. ಅವರುಗಳನ್ನು ತೆಗೆದು ಅವರ ಜಾಗದಲ್ಲಿ-ಈ ಗ್ರಾಮಲೆಕ್ಕಿಗರನ್ನು ಸರ್ಕಾರದವರೇ ಆರಿಸಿ ನೇಮಕ ಮಾಡತಕ್ಕಂಥ ಪದ್ಧತಿ ಈಗ ಜಾರಿಯಲ್ಲಿದೆ ಇದಕ್ಕಿಂತ ಉತ್ತಮವಾದ ಪದ್ಧತಿ ಬೇರೆ ಯಾವುದಾದರು ಇದ್ದರೆ, ಅದನ್ನು ಮಾನ್ಯ ಸದಸ್ಯರು ಸಲಹೆ ಮಾಡಬಹುದು. ಆದರೆ ಈಗ ಇವರನ್ನು ಹತೋಟಿಯಲ್ಲಿಟ್ಟುಕೊಳ್ಳುವುದಕ್ಕಾಗಿ ಇವರ ಬಗ್ಗೆ ಏನೇನು ಕಾರ್ಯಕ್ರಮ ಕೈಕೊಂಡಿದ್ದೇವೆಂಬುದನ್ನು ಇಲ್ಲಿ ಮೂರನೇ ಪ್ರಶ್ನೆಗೆ ಉತ್ತರವಾಗಿ ಹೇಳಿದ್ದೇನೆ. 1974-75 ಮತ್ತು 1975-76ರಲ್ಲಿ ಯಾವ ಯಾವ ಕಾರಣದಿಂದ ಎಷ್ಟೆಷ್ಟು ಜನರನ್ನು ಕೆಲಸದಿಂದ ತೆಗೆಯಲಾಯಿತೆಂಬುದನ್ನು ಇದರಲ್ಲಿ ಹೇಳಲಾಗಿದೆ. ಇದರ ಜೊತೆಗೆ 1976-77ರಲ್ಲಿ 4 ಜನರನ್ನು ಸರ್ಕಾರಿ ಪಣ ದುರುಪಯೋಗಪಡಿಸಿದ್ದರಿಂದ, 4 ಜನರನ್ನು ದಾಖಲೆಗಳ ತಿದ್ದುಪಡಿಯಿಂದಾಗಿ, 10 ಜನರನ್ನು ಮುಖ್ಯಾಲಯಗಳಲ್ಲಿ ವಾಸಿಸದಿರುವುದರಿಂದಾಗಿ, 8 ಜನರನ್ನು ಅನಧಿಕೃತ ಗೈರು ಹಾಜರಾತಿಯಿಂದಾಗಿ ಅನಭ್ಯವರ್ತನೆ ಹಾಗೂ ಕರ್ತವ್ಯಲೋಪದಿಂದಾಗಿ ಕೆಲಸದಿಂದ ತೆಗೆದುಹಾಕಲಾಗಿದೆ. ಜೊತೆಗೆ 1976ರಲ್ಲಿ ವಿಜಿಲೆನ್ಸ್ ಟ್ರಾಪ್ ಕೇಸ್ ಒಂದು ನಡೆದಿದೆ ಹೀಗೆ ಪ್ರತಿವರ್ಷವೂ ನಡೆಯುತ್ತಿದೆ. ಮುಖ್ಯವಾಗಿ ಇವರಲ್ಲಿ ಅನೇಕರು ಆಯಾ ಊರಿನಲ್ಲಿ ಅಂದರೆ ಪಂಚಾಯಿತಿ ಕೇಂದ್ರದಲ್ಲಿ ಮಾಡದೆ ತಾಲ್ಲೂಕ್ ಲೆವಲ್‌ನಲ್ಲಿ ವಾಸ ಮಾಡುತ್ತಿರುವುದು ಕಂಡುಬಂದಿದೆ ಮತ್ತೆ ಕೆಲವರ

ಎಲ್ಲಿ ವಾಸ ಮಾಡುತ್ತಿದ್ದಾರೆಂಬುದೇ ನಮಗೆ ಗೊತ್ತಿರುವುದಿಲ್ಲ. ಇಂತಹ ಸಂದರ್ಭಗಳಲ್ಲಿ ನಾವು ಸ್ವಲ್ಪ ಕಟ್ಟುವಾದ ಕಾರ್ಯಕ್ರಮ ಕೈಕೊಂಡಿದ್ದರಿಂದ ಈ ಒಂದು ಸ್ಥಿತಿಗೆ ಬಂದಿದೆ. ಯಾರು ಪಹಣಿ ತಿದ್ದಿದ್ದಾರೆ ಎಂಬುದು ಗಮನಕ್ಕೆ ಬಂದಕೂಡಲೇ ಅವರನ್ನು ಸಸ್ಪೆಂಡ್ ಮಾಡುತ್ತಿದ್ದೇವೆ. ಹೀಗೆ ಪ್ರತಿವರ್ಷ 500 ರಿಂದ 600 ಜನರಿಗೆ ಶಿಕ್ಷೆ ಕೊಟ್ಟರೂ ಸಹ ಇದು ನಡೆಯುತ್ತಲೇ ಇದೆ. ಇದನ್ನು ಪೂರ್ಣವಾಗಿ ನಿಲ್ಲಿಸಲು ಕಠಿಣ ಶಿಕ್ಷೆ ವಿಧಿಸುವುದು ಇನ್ನೊಂದು ಮಾರ್ಗ. ಇಷ್ಟಗಳ ಜೊತೆಗೆ ಉಳಿದ ಮಾರ್ಗಗಳು ಏನಾದರು ಇದ್ದರೆ, ಆ ಬಗ್ಗೆ ಮಾನ್ಯ ಸದಸ್ಯರು ಸಲಹೆ ಮಾಡಿದರೆ ಅದನ್ನು ಕೂಡ ನಾವು ಪರಿಶೀಲನೆ ಮಾಡುವುದಕ್ಕೆ ಸಿದ್ಧರಾಗಿದ್ದೇವೆ.

ಶ್ರೀ ಕೆ. ಸಿದ್ದಯ್ಯ,—ಇಲ್ಲಿ ಹಣ ದುರುಪಯೋಗವಾಗುವುದಕ್ಕೆ ಕಾರಣ, ಇವರು ವಸೂಲಿ ಮಾಡಿದ ಹಣವನ್ನು ತಿಂಗಳ ಕೊನೆಯವರೆಗೂ ಇಟ್ಟುಕೊಳ್ಳುವುದರಿಂದ. ಇದನ್ನು ತಪ್ಪಿಸಲು ಹಣ ವಸೂಲು ಮಾಡಿದ ತಕ್ಷಣ ಇಲ್ಲವೇ 2-3 ದಿವಸಗಳಿಗೆ ಒಂದು ಸಲ ಹಣವನ್ನು ರೆಮಿಟ್ ಮಾಡ ಬೇಕೆಂದು ತಿಳಿಸಿದರೆ ಹಣ ದುರುಪಯೋಗವಾಗುವುದಕ್ಕೆ ಅವಕಾಶವೇ ಇರುವುದಿಲ್ಲ?

ಶ್ರೀ ಎನ್. ಹುಚ್ಚಮಾಸ್ತಿಗೌಡ,—ಆಗಾಗ್ಗೆ ಹಣ ಕಟ್ಟುವಂತೆ ಮಾಡಬೇಕಾದರೆ ಅದರ ಖರ್ಚನ್ನು ನಾವು ಕೊಡಬೇಕಾಗುತ್ತದೆ. ಆದಕಾರಣ ತಿಂಗಳ ಆಖ್ಯೆರಿನವರೆಗೆ ಹಣ ಇಟ್ಟುಕೊಂಡು ಕೊನೆಯಲ್ಲಿ ಕಟ್ಟಬೇಕೆಂದು ಈಗ ನಿಯಮವಿದೆ. ಆದರೂ ಸಹ ಮಾನ್ಯ ಸದಸ್ಯರು ಹೇಳಿದಂತಹ ಸಲಹೆಯನ್ನು ಜಾರಿಗೆ ತರುವುದು ಸಾಧ್ಯವೇ ಹೇಗೆ ಎಂಬುದನ್ನು ನಾನು ಪರಿಶೀಲನೆ ಮಾಡುತ್ತೇನೆ

ಶ್ರೀ ಟಿ ಎಂ. ಮಂಜುನಾಥ —ಗ್ರಾಮಾಧಿಕಾರಿಗಳು ತಪ್ಪು ಮಾಡುತ್ತಾರೆಂದು ಹೇಳಿದರು. ಇತ್ತೀಚೆಗೆ ಲ್ಯಾಂಡ್ ರಿಫಾರಮ್ಸ್‌ನಲ್ಲಿಯೂ ಪಹಣಿ ತಿದ್ದುವುದು ಜಾಸ್ತಿಯಾಗಿದೆ. ಇಂತಹ ಸಂದರ್ಭ ಗಳಲ್ಲಿ ಸರ್ಕಾರಕ್ಕೆ ಅರ್ಜಿಗಳೇನಾದರೂ ಬಂದರೆ, ತಪ್ಪು ಮಾಡಿದವರು ಯಾರೇ ಆಗಲಿ, ಅವರ ಮೇಲೆ ತಕ್ಷಣವೇ ಶಿಸ್ತಿನ ಕ್ರಮ ಕೈಕೊಳ್ಳಬೇಕೆಂದು ಕೂಡಲೇ ಆದೇಶ ಕೊಡುತ್ತೀರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಪಹಣಿಯನ್ನು ತಿದ್ದಲಾಗಿದೆ ಎಂಬುದು ಸರ್ಕಾರಕ್ಕೆ ತಿಳಿಯಬೇಕಾದರೆ ಯಾರಿಂದಲಾದರೂ ಅರ್ಜಿ ಬರಬೇಕು. ಆ ರೀತಿ ಅರ್ಜಿ ಬಂದರೆ ಆದರ ಬಗ್ಗೆ ನೂಕ್ತ ಕ್ರಮ ಕೈಕೊಳ್ಳುತ್ತೇವೆ. ಮತ್ತು ಪಹಣಿ ಸರಿಯಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ಆಗಾಗ್ಗೆ ನೋಡಲಾಗುತ್ತದೆ ಜೊತೆಗೆ ಈಗಿನ ಪಹಣಿ ಪದ್ಧತಿಯನ್ನೇ ಬದಲಾವಣೆ ಮಾಡ ಬೇಕೆಂಬ ವಿಚಾರ ಸರ್ಕಾರದ ಮುಂದಿದೆ. ಅದನ್ನು ಆದಷ್ಟು ಬೇಗ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಅಬ್ದುಲ್ ಖುದ್ದೂಸ್ ಅನ್ಸರ್.—ನಮ್ಮ ಲ್ಯಾಂಡ್ ಟ್ರಿಬ್ಯುನಲ್‌ನಲ್ಲಿ 272 ಕೇಸ್‌ನಲ್ಲಿ ದಾಖಲೆಗಳನ್ನು ತಿದ್ದುಪಡಿ ಮಾಡಿದ್ದಾರೆ. ಇದರಿಂದ ಅಲ್ಲಿಯ ಕೆಲಸಕ್ಕೆ ತೊಂದರೆಯಾಗಿದೆ. ಇಂತಹ ಸಂದರ್ಭಗಳಲ್ಲಿ ಸರ್ಕಾರದವರು ಸಂಬಂಧಪಟ್ಟವರ ಮೇಲೆ ಏನು ಕ್ರಮ ಕೈಕೊಂಡಿದ್ದಾರೆ?

ಶ್ರೀ ಎನ್, ಹುಚ್ಚಮಾಸ್ತಿಗೌಡ,—ಗ್ರಾಮಲೆಕ್ಕಿಗರೇ ಪಹಣಿ ತಿದ್ದುತ್ತಾರೆಂಬ ಬಗ್ಗೆ ಸರ್ಕಾ ರಕ್ಕೆ ಅರ್ಜಿಗಳು ಬರುತ್ತವೆ. ಜೊತೆಗೆ ಮಾನ್ಯ ಸದಸ್ಯರಿಗೆ ಗೊತ್ತಿರುವಂತೆ ಲ್ಯಾಂಡ್ ಟ್ರಿಬ್ಯುನಲ್ ನಲ್ಲಿಯೇ ಈ ರೀತಿ ಮಾಡುತ್ತಿದ್ದಾರೆಂದು ಸಹ ಸರ್ಕಾರಕ್ಕೆ ಅರ್ಜಿಗಳು ಬಂದಿವೆ. ಇಂತಹ ಸಂದರ್ಭ ಗಳಲ್ಲಿ ವಿಚಾರಣೆ ಮಾಡಿ ಸಂಬಂಧಪಟ್ಟವರ ಮೇಲೆ ನೂಕ್ತ ಕಾರ್ಯಕ್ರಮ ಕೈಕೊಳ್ಳುತ್ತೇವೆ.

Food Advisory Committees

267. Sri P. M. Bangi (Jamkhandi).—Will the Minister for Food and Forests be pleased to state.—

(*a*) whether it is not a fact that Food Advisory Committees were constituted in each taluk of the State consisting of Official and Non-official members two years ago;

(*b*) in how many taluk such Committees were constituted and the date of constit uting each committee;